

# ಕಿಚ್ಚ ಸುದೀಪ್ ಹುಲಿ ಸವಾರಿ!

**ಸುದೀಪ್ ಅಭಿನಯದ ‘ಹೆಬ್ಬುಲಿ’ ತೆರೆ ಕಾಣಲು ಸಿದ್ಧತೆ ನಡೆಸುತ್ತಿದೆ. ಈ ಚಿತ್ರದ ಮೂಲಕ ಅವರು, ಬಹುಕಾಲದ ನಂತರ ರೀಮೇಕ್ ಚೌಕಟ್ಟಿನಿಂದ ಹೊರ ಬಂದಿದ್ದಾರೆ.**

ಫೆಬ್ರುವರಿ ತಿಂಗಳು ಗಾಂಧಿನಗರದಲ್ಲಿ ಹುಲಿ ಗರ್ಜನೆಯ ಸಮಯ. ಸುದೀಪ್ ಅಭಿನಯದ ‘ಹೆಬ್ಬುಲಿ’ ಈಗ ತೆರೆ ಕಾಣುವ ಅಂತಿಮ ಹಂತದ ಸಿದ್ಧತೆಯಲ್ಲಿದೆ. ‘ಗಜಕೇಸರಿ’ ಚಿತ್ರದ ನಿರ್ದೇಶಕ ಕೃಷ್ಣ, ಈಗ ‘ಹೆಬ್ಬುಲಿ’ ರೂಪಿಸಿದ್ದಾರೆ. ಸುದೀಪ್‌ರ ‘ರಂಗ ಎಸ್‌ಎಸ್‌ಎಲ್‌ಸಿ’ ಹಾಗೂ ‘ಕೆಂಪೇಗೌಡ’ ಚಿತ್ರಗಳಿಗೆ ಛಾಯಾಗ್ರಹಣ ಮಾಡಿದ್ದ ಕೃಷ್ಣ, ಇದೀಗ ತಮ್ಮ ನೆಚ್ಚಿನ ನಟನ ಚಿತ್ರವನ್ನು ನಿರ್ದೇಶಿಸಿದ್ದಾರೆ.

‘ಮುಕುಂದ ಮುರಾರಿ’ ಚಿತ್ರದ ನಂತರ ತೆರೆ ಕಾಣುತ್ತಿರುವ ಸುದೀಪ್ ನಟನೆಯ ಚಿತ್ರ ‘ಹೆಬ್ಬುಲಿ’ ಅಭಿಮಾನಿಗಳ ಪಾಲಿಗೆ ಹಬ್ಬವಾಗುವ ನಿರೀಕ್ಷೆಯಿದೆ.

ಸುದೀಪ್‌ರ ತಾರಾವರ್ಚಸ್ಸಿನ ಜೊತೆಗೆ, ಕಥೆಯ ಕಾರಣದಿಂದಲೂ ‘ಹೆಬ್ಬುಲಿ’ ಚಿತ್ರರಸಿಕರ ಕುತೂಹಲ ಕೆರಳಿಸಿದೆ. ಇದು ಸೇನೆಯ ಕಾರ್ಯಾಚರಣೆ ಕುರಿತ ಕಥನ. ಶತ್ರುಗಳಿಗೆ ರಕ್ಷಣೆ ನೀಡಿದ ದೇಶದೊಳಗೇ ನುಗ್ಗಿ ಉಗ್ರರನ್ನು ಬಗ್ಗುಬಡಿಯುವ ಸೈನಿಕ ಕಾರ್ಯಾಚರಣೆ ‘ಹೆಬ್ಬುಲಿ’ ಚಿತ್ರದಲ್ಲಿದೆ. ಸೈನಿಕರ ತ್ಯಾಗ ಹಾಗೂ ದೇಶಭಕ್ತಿ ಕುರಿತ ಚರ್ಚೆಗಳು ಚಾಲನೆಯಲ್ಲಿರುವ ಸಂದರ್ಭದಲ್ಲಿ ರೂಪುಗೊಂಡಿರುವ ‘ಹೆಬ್ಬುಲಿ’ ಎಲ್ಲ ಬಗೆಯ ರಂಜನೆಯನ್ನೂ ಒಳಗೊಂಡ ಸಿನಿಮಾ. ಶತ್ರುಗಳನ್ನು ಬಗ್ಗುಬಡಿಯುವ ಕಮಾಂಡರ್ ಪಾತ್ರ ಸುದೀಪ್ ಅವರದು.

‘ಕೆಂಪೇಗೌಡ’ ಚಿತ್ರದಲ್ಲಿನ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಮಿಂಚಿದ್ದ ಸುದೀಪ್, ಇದೇ ಮೊದಲ ಬಾರಿಗೆ ಸಿಪಾಯಿಯ ಪೋಷಾಕು ತೊಟ್ಟಿದ್ದಾರೆ. ಕಥೆ ಕೇಳದೆಯೇ ಚಿತ್ರವನ್ನು ಒಪ್ಪಿಕೊಂಡಿರುವ ಅವರಿಗೆ, ‘ಹೆಬ್ಬುಲಿ’ಯ ಪಯಣ ಒಂದು ವಿಶಿಷ್ಟ ಅನುಭವ ಎನ್ನಿಸಿದೆ.

ಬೆಂಗಳೂರು, ಮೈಸೂರು, ಗೋವಾಗಳ ಜೊತೆಗೆ ಕಾಶ್ಮೀರದ ರಮ್ಯ–ರೋಚಕ ಪರಿಸರದಲ್ಲೂ ಕೃಷ್ಣ ಚಿತ್ರೀಕರಣ ನಡೆಸಿದ್ದಾರೆ. ಸೇನೆ–ಉಗ್ರರ ನಡುವಣ ಸಂಘರ್ಷದ ಕಥೆಯಲ್ಲಿ ಕಾಶ್ಮೀರ ಇಲ್ಲದೆ ಹೋದರೆ ಹೇಗೆ? ಕಾಶ್ಮೀರದ ಪರಿಸರದಲ್ಲಿ ಚಿತ್ರೀಕರಣ ನಡೆಸುವ ಉಮೇದಿನಿಂದ ಅಲ್ಲಿಗೆ ಹೋದ ಚಿತ್ರತಂಡ ಸಾಕಷ್ಟು ಪಡಿಪಾಟಲು ಅನುಭವಿಸಿತಂತೆ. ಒಂದೆಡೆ ಉಗ್ರರ ಉಪಟಳದ ಭೀತಿ. ಇನ್ನೊಂದೆಡೆ ಪ್ರತಿಕೂಲ ಪರಿಸರ. ಅಡೆತಡೆಗಳಿಗೆ ಅಳುಕದೆ ‘ಹೆಬ್ಬುಲಿ’ ತಂಡ ಚಿತ್ರೀಕರಣ ನಡೆಸಿದೆ.

ರಕ್ಷಣಾ ಪಡೆಗಳ ಕಣ್ಗಾವಲಿನ ರಕ್ಷಣೆಯಲ್ಲಿ ಆರು ದಿನಗಳ ಕಾಲ ಚಿತ್ರೀಕರಣ ನಡೆಸಿರುವುದು ಬಹು ದೊಡ್ಡ ಸಾಹಸ ಎಂದು ಚಿತ್ರತಂಡ ಹೇಳಿಕೊಂಡಿದೆ. ಕೃಷ್ಣ ಅವರ ಗರಡಿಯಲ್ಲಿ ಪಳಗಿರುವ ಕರುಣಾಕರ್ ‘ಹೆಬ್ಬುಲಿ’ ಚಿತ್ರದ ಛಾಯಾಗ್ರಹಣದ ಹೊಣೆ ನಿರ್ವಹಿಸಿದ್ದಾರೆ. ಕಾಶ್ಮೀರದ ಚೆಲುವಿನೊಂದಿಗೆ ಅಲ್ಲಿನ ಕ್ಷೋಭೆಯನ್ನೂ ಅವರು ಅದ್ಭುತವಾಗಿ ಸೆರೆ ಹಿಡಿದಿದ್ದಾರಂತೆ. ಕಾಶ್ಮೀರದಲ್ಲಿ ಚಿತ್ರೀಕರಿಸಿದ ಈ ದೃಶ್ಯಗಳು ಚಿತ್ರದ ಹೈಲೈಟ್ ಆಗಲಿವೆ.

‘ಮಾಣಿಕ್ಯ’ ಚಿತ್ರದಲ್ಲಿ ಅಭಿಮಾನಿಗಳ ಗಮನಸೆಳೆದಿದ್ದ ಸುದೀಪ್–ರವಿಚಂದ್ರನ್ ಜೋಡಿ ‘ಹೆಬ್ಬುಲಿ’ಯಲ್ಲೂ ಮುಂದುವರಿದಿದೆ. ಅಮಲಾ ಪೌಲ್ ಚಿತ್ರದ ನಾಯಕಿ. ರವಿಶಂಕರ್ ಹಾಗೂ ಚಿಕ್ಕಣ್ಣ ತಾರಾಗಣದಲ್ಲಿರುವ ಪ್ರಮುಖರು. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ.

■ ರಘು